VIJAYAKUMAR KANNUR

Digitally signed by VIJAYAKUMAR KANNUR
Date: 2026.01.21 16:26:05 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 21.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದ :</u>**

ನಿಪಿ 8 ರ ದಾಖಲೆಯ ಪ್ರಕಾರ ದಿಃ 09.07.2018 ರಂದು ಆರೋಪಿಗೆ ರೂ. 5 ಲಕ್ಷ ಹಣ ಸಂದಾಯ ಮಾಡಿರುವುದಾಗಿ ಎಂದು ನಮೂದು ಇರುವುದು ಎಂದರೆ ಸರಿ ದಿಃ 05.11.2018 ರಂದು ರೂ. 26,500/- ಹಣವನ್ನು ಆರೋಪಿಯು ನಮ್ಮ ಬ್ಯಾಂಕಿಗೆ ಪೆನಾಲ್ಟಿ ಮತ್ತು ಬಡ್ಡಿಯ ರೂಪದಲ್ಲಿ ಜಮೆ ಮಾಡಿರುವುದಾಗಿ ಎಂದು ಅದರಲ್ಲಿ ಕಾಣಿಸಿರುವೆವು ಎಂದರೆ ಸರಿ. ದಿಃ 30.03.2019 ರಂದು ರೂ. 35,305/ ಹಣ ಆರೋಪಿ ನಗದು ರೂಪದಲ್ಲಿ ನಮ್ಮ ಬ್ಯಾಂಕಿಗೆ ಜಮೆ ಮಾಡಿರುವುದಾಗಿ ಎಂದು ನಮೂದು ಮಾಡಿರುವರು ಎಂದರೆ ಸರಿ. ಈ ಹಣ ಜಮೆ ಮಾಡಿದ ಬಗ್ಗೆ ಆರೋಪಿಯ ಸಾಲದ ಖಾತೆಯಲ್ಲಿ ಕಾಣಿಸಿರುವುಲ್ಲ, ಕೇವಲ ರೂ. 5 ಲಕ್ಷ ಹಣ ಸಾಲದ ಹಣ ಇರುವುದಾಗಿ ಎಂದು ಕಾಣಿಸಿರುವೆವು ಎಂದರೇ ಸಾಕ್ಷಿ ಆರೋಪಿ ಜಮೆ ಮಾಡಿರುವ ಹಣ ಬಡ್ಡಿಗೆ ಕಡಿತಗೊಳಿಸಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ದಿಃ 16.11.2022 ರಂದು ಆರೋಪಿ ಜಮೆ ಮಾಡಿರುವ ಹಣದಲ್ಲಿ ಲಿಗಲ್ ಪೀಸ್ ಅಂತ ರೂ. 12,500/- ಅಂತ ಕಡಿತಗೊಳಿಸಿದ್ದೇವೆ ಎಂದರೆ ಅದು ಚೆಕ್ ನ್ನು ನಗಧೀಕರಣಕ್ಕೆ ಕಳುಹಿಸಿದ ಖರ್ಚಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಹಣವನ್ನು ಕಡಿತಗೊಳಿದ ನಂತರ ಆರೋಪಿಯ ಸಾಲದ ಬ್ಯಾಂಕ ಖಾತೆಯಲ್ಲಿ ರೂ. 5,13,195/- ಅಂತ ಕಾಣಿಸಿದ್ದೇವೆ ಎಂದರೆ ಸರಿ. ನಿಪಿ 8 ರ ದಾಖಲೆಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ನಾವು ತಯಾರು ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ.

2. ಆರೋಪಿ ತಾನು ತೆಗೆದುಕೊಂಡಿರುವ ರೂ. 1 ಲಕ್ಷ ಸಾಲದ ಹಣದಲ್ಲಿ ಈಗಾಗಲೇ ರೂ. 60 ಸಾವಿರ ಹಣ ಸಂದಾಯ ಮಾಡಿರುವನು ಎಂದರೆ ಸರಿಯಲ್ಲ. ಆರೋಪಿ ಸಂದಾಯ ಮಾಡಿರುವ ಹಣವನ್ನು ಈ ದೂರಿನಲ್ಲಿ ಹೇಳದೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸು ಜಾರಿಯಾಗದೇ ಇದ್ದರೂ ಸಹಿತ ನೋಟಿಸು ಜಾರಿಯಾಗಿದೆ ಎಂದು ಸುಳ್ಳು ಬರೆಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಅಧಾರ ಕಾರ್ಡನ ವಿಳಾಸಕ್ಕೆ ನೋಟಿಸು ಜಾರಿಮಾಡಿರುವೆವು. ಆರೋಪಿಯ ಸಾಲದ ಖಾತೆಗೆ ಮಂಜೂರು ಮಾಡಿರುವ ರೂ. 5 ಲಕ್ಷ ಹಣದಲ್ಲಿ ಅದೇ ದಿನ ಆಗಿನ ನಮ್ಮ ಬ್ಯಾಂಕಿನ ವ್ಯವಸ್ಥಾಪಕರಾದ ನಾಯಕ ಎಂಬುವವರು ರೂ. 4 ಲಕ್ಷ ಹಣವನ್ನು ವೈಯಿಕ್ತಿಕವಾಗಿ ತೆಗೆದುಕೊಂಡಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ನಮ್ಮ ಬ್ಯಾಂಕಿನಿಂದ ಆರೋಪಿಗೆ ಕೇವಲ ರೂ. 1 ಲಕ್ಷ ಹಣ ಸಂದಾಯವಾಗಿರುವುದು ಎಂದರೆ ಸರಿಯಲ್ಲ. ಆರೋಪಿತನಿಗೆ ರೂ. 4 ಲಕ್ಷ ಹಣ ಸಂದಾಯ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲ ಮಂಜೂರಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಅವಶ್ಯಕತೆ ಬಿದ್ದರೆ ಹಾಜರು ಪಡಿಸುತ್ತೇನೆ. ಆರೋಪಿ ನಿಪಿ 1 ರ ಚೆಕ್ ನ್ನು ಕಾನೂನು ಬದ್ದವಾ ಋಣ ಸಂದಾಯಕ್ಕಾಗಿ ನೀಡಿರುವುದಿಲ್ಲ, ಭದ್ರತೆಗಾಗಿ ನೀಡಿರುವ ಚೆಕ್ ನ್ನು ದುರುಪಯೋಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ